# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತಿ.ನರಸೀಪುರ

## ಸಿ.ಸಿ. 4082/2022

| | | | | |
|---|---|---|---|---|
| 01 | ಹೆಸರು | ಡಾ.ಮಾಲತೇಶ್ | ಸಿ ಡಬ್ಲೂ | 05 |
| 02 | ತಂದೆಯ ಹೆಸರು | ಶಿವಪ್ಪ | ಪಿಡಬ್ಲೂ | 02 |
| 03 | ವಯಸ್ಸು | 43 | ಪ್ರಮಾಣೀಕರಿಸಲಾದ ದಿನಾಂಕಃ 17.06.2026 | |
| 04 | ಉದ್ಯೋಗ | ವೈದ್ಯಾಧೀಕಾರಿಗಳು | | |
| 05 | ಊರು | ಬನ್ನೂರು | | |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು ಏಪ್ರೀಲ್ 2021 ರಿಂದ ಇಲ್ಲಿಯವರೆಗೂ ಬನ್ನೂರಿನ ಸರ್ಕಾರಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ವೈದ್ಯಾಧೀಕಾರಿಗಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಾನು ದಿಃ **30.07.2022** ರಂದು ಕರ್ತವ್ಯದಲ್ಲಿ ಇದ್ದಾಗ ರಾತ್ರಿ **9.20** ಗಂಟೆಗೆ ಚಾಸಾ **1** ರವರನ್ನು ಅವರ ಸಹೋದರನಾದ ಶೇಖರ್ ಎನ್ನುವವರು ನಮ್ಮ ಆಸ್ಪತ್ರೆಗೆ ಚಿಕಿತ್ಸೆಗೆ ಬಂದಿರುತ್ತಾರೆ. ನಾನು ಅವರನ್ನು ವಿಚಾರಿಸಿದಾಗ ಅವರಿಗೆ ಗ್ಯಾಸ್ ರಾಜು ಎನ್ನುವವರು ಸಂಜೆ **5.30** ಗಂಟೆಗೆ ಯಾಚೇನಹಳ್ಳಿ ಗ್ರಾಮದಲ್ಲಿ ಬಾಟಲಿಯಿಂದ ಹಲ್ಲೆ ಮಾಡಿರುವುದಾಗಿ ತಿಳಿಸಿರುತ್ತಾರೆ. ನಾನು ಅವರನ್ನು ತಪಾಸಣೆ ಮಾಡಿದಾಗ ಅವರ ಎಡ ಮೊಣಕೈಯ ಕೆಳಭಾಗದಲ್ಲಿ ಹರಿದ ಗಾಯವಾಗಿತ್ತು, ಅವರ ಬಲಕೈ ಮತ್ತು ಕುತ್ತಿಗೆ ಭಾಗದಲ್ಲಿ ನೋವು ಇರುವುದು ಕಂಡು ಬರುತ್ತದೆ. ಸಿ.ಟಿ. ಸ್ಕ್ಯಾನ್ ಮತ್ತು ಎಕ್ಸ್ ರೆ ವರದಿಯ ಪ್ರಕಾರ ಯಾವುದೇ ಗಂಭೀರ ಗಾಯವಾಗಿಲ್ಲ ಎಂದು ಕಂಡು ಬಂದಿರುತ್ತದೆ. ಸದರಿ ಗಾಯಗಳು ಸಾಮಾನ್ಯ ಸ್ವರೂಪದ್ದಾಗಿರುತ್ತವೆ. ನಾನು ಚಾಸಾ-**6** ರವರ ಮನವಿಯಂತೆ ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸಾಕ್ಷಿಯು ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ **3** ಎಂದು, ಸಾಕ್ಷಿಯ ಸಹಿಯನ್ನು **ನಿ ಪಿ 3(ಎ)** ಎಂದು

ಗುರುತಿಸಲಾಯಿತು. ಬಾಟಲಿಯಿಂದ ಹಲ್ಲೆ ಮಾಡಿದಾಗ ಈ ರೀತಿಯ ನೋವುಗಳಾಗುವ ಸಾಧ್ಯತೆ ಇರುತ್ತದೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ.ಎಸ್.ಸಿ.ಎಸ್ ವಕೀಲರರಿಂದಃ**

ನಾನು ನಿಪಿ 3 ರಲ್ಲಿ ಗಾಯದ ಹಿನ್ನೇಲೆಯನ್ನು ಚಾಸಾ 1 ರವರ ಹೇಳಿಕೆಯನ್ನಾಧರಿಸಿ ನಮೂದಿಸಿರುತ್ತೇನೆ ಎಂದರೆ ಸರಿ. ದ್ವಿಚಕ್ರ ವಾಹನನಿಂದ ತಾವೆ ಸ್ವತಃ ಬಿದ್ದಾಗ ನಿಪಿ 3 ರಲ್ಲಿ ಆಗುವ ಸಾಧ್ಯತೆಗಳು ಇರುತ್ತವೆ ಎಂದರೆ ಸರಿ. ನಾನು ಚಾಸಾ 1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸುಳ್ಳು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಾಗಿದೆ.

Sd/-

(ಸಚಿನ್ ಹೆಚ್ . ಆರ್.)

ಪ್ರಧಾನ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ್.ಸಿ.,

ತಿ.ನರಸೀಪುರ.